ತಾವು ಸಿನಿಮಾದಲ್ಲಿ ಕ್ಯಾಮೆರಾ ಎದುರಿಸಿದ ಮೊದಲ ಅನುಭವವನ್ನು ಧರ್ಮಣ್ಣ ಉತ್ಸುಕರಾಗಿ ಹೇಳುತ್ತಾರೆ.

‘ಸಿನಿಮಾ ರಂಗದಲ್ಲಿ ಎಲ್ಲವೂ ಸುಲಭವಲ್ಲ’ ಎನ್ನುವ ಅವರು, ‘ಇಲ್ಲಿ ನನ್ನನ್ನು ಇದುವರೆಗೂ ಹಲವರ ಬೆಂಬಲ ಗಟ್ಟಿಯಾಗಿ ನಿಲ್ಲಿಸಿದೆ. ಒಂದು ಗಿಡ ಬೆಳೆಯಬೇಕೆಂದರೆ ಮಣ್ಣು, ಗಾಳಿ, ನೀರು ಇವೆಲ್ಲವೂ ಸಹಕರಿಸಬೇಕು. ಹಾಗೇ, ನನ್ನ ಅಣ್ಣ, ಅಪ್ಪ ಅಮ್ಮ, ಹೆಂಡತಿ, ಸ್ನೇಹಿತರು, ಸಿನಿಮಾ ಕಲಾವಿದರು ನನ್ನನ್ನು ಬೆಳೆಸಿದ್ದಾರೆ’ ಎನ್ನುತ್ತಾರೆ.

‘ರಾಮಾ ರಾಮಾ ರೇ’ ನಂತರ ಹಲವು ಸಿನಿಮಾಗಳಲ್ಲಿ ಧರ್ಮಣ್ಣ ನಟಿಸಿದರು. ‘ಮುಗುಳುನಗೆ’, ‘ಅಂಜನಿಪುತ್ರ’, ‘ಸ್ಟ್ರೈಕರ್’, ‘ಕಾಣದಂತೆ ಮಾಯವಾದನು’, ‘ಲಂಬೋದರ’, ‘ಕನ್ನಡ್ ಗೊತ್ತಿಲ್ಲ’, ‘ಶುಗರ್‌ಲೆಸ್’, ‘ಐ ಆಮ್ ಪ್ರೆಗ್ನೆಂಟ್’, ‘ಇನ್‌ಸ್ಪೆಕ್ಟರ್ ವಿಕ್ರಂ’, ‘ರಾಬರ್ಟ್’, ‘ಪಡ್ಡೆಹುಲಿ’, ‘ಕ್ರಾಂತಿ...’ – ಹೀಗೆ ಸಾಕಷ್ಟು ಸಿನಿಮಾಗಳು ಬದುಕಿಗೆ ದಾರಿ ರೂಪಿಸಿಕೊಟ್ಟವು.

ಇದೀಗ ಮುಖ್ಯಪಾತ್ರದಲ್ಲಿ ‘ರಾಜಯೋಗ’ ಸಿನಿಮಾದಲ್ಲಿ ನಟಿಸುತ್ತಿದ್ದು, ಜನರನ್ನು ನಗಿಸುವ ಸಿದ್ಧತೆಯಲ್ಲಿದ್ದಾರೆ ಧರ್ಮಣ್ಣ.

‘ರಾಜಯೋಗ’ ಸಿನಿಮಾ ಕೌಟುಂಬಿಕ ತಿಳಿಹಾಸ್ಯದ ಸಿನಿಮಾ ಎನ್ನುವುದು ಅವರ ವಿವರಣೆ. ‘ಈ ಸಿನಿಮಾದಲ್ಲಿ ಕಥೆಯೇ ಹೀರೊ. ಕೌಟುಂಬಿಕ ಜಂಜಾಟಗಳ ನಡುವೆ ತಿಳಿ ಹಾಸ್ಯ ಹೊದ್ದಿರುವ ಸಿನಿಮಾ. ಅನಂತನಾಗ್, ಶಶಿಕುಮಾರ್, ಜಗ್ಗೇಶ್ ಅವರಂಥ ನಟರು ಈ ಹಿಂದೆ ಇಂಥ ಪ್ರಕಾರದ ಸಿನಿಮಾಗಳಲ್ಲಿ ನಟಿಸಿ ಜನರ ಮನ ಗೆದ್ದಿದ್ದರು. ಆದರೆ ಈಚೆಗೆ ಇಂಥ ಪ್ರಕಾರದ ಸಿನಿಮಾ ಕಡಿಮೆಯಾಗಿವೆ. ಹೀಗಾಗಿ ಮತ್ತೆ ಇದೇ ರೀತಿಯ ವಿಶೇಷ ಕಂಟೆಂಟ್‌ನೊಂದಿಗೆ ಪ್ರಯತ್ನ ಮಾಡುತ್ತಿದ್ದೇವೆ. ಹಳ್ಳಿ ವಾತಾವರಣದಲ್ಲಿ ಇಡೀ ಸಿನಿಮಾ ಇದೆ. ಕುಟುಂಬದ ಜಂಜಾಟದ ನಡುವೆ ಕಾಮಿಡಿ, ಎಮೋಷನ್ ಇರುತ್ತದೆ. ನಿರ್ದೇಶಕ ಲಿಂಗರಾಜು ಅವರಿಗೂ ಇದು ಮೊದಲ ಸಿನಿಮಾ’ ಎಂದು ಸಿನಿಮಾ ಬಗ್ಗೆ ವಿವರಿಸುತ್ತಾರೆ.

ಈ ಕಥೆಗೂ ತಮ್ಮ ಜೀವನಕ್ಕೂ ಸಾಮ್ಯತೆ ಇದೆ ಎನ್ನುತ್ತಾರೆ ಅವರು. ‘ಈ ಕಥೆ ಕೇಳಿದಾಗ ನನ್ನ ಜೀವನವೇ ಕಣ್ಣಮುಂದೆ ಬಂದು ಹೋದ ಹಾಗೆ ಅನಿಸಿತು. ನಾನು ಬೆಳೆದಿದ್ದೇ ಹಾಗೇ. ಹಳ್ಳಿ ವಾತಾವರಣದಲ್ಲಿ ಮಜವಾಗಿ ಬೆಳೆದೆ. ನನ್ನ ಭಾಷೆ ಕೂಡ ಹಾಗೇ ಇದೆ. ಸಿನಿಮಾ ಕೂಡ ಅದೇ ಧಾಟಿಯಲ್ಲಿದೆ. ಸಿನಿಮಾದಲ್ಲಿ ದಾವಣಗೆರೆ, ಚಿತ್ರದುರ್ಗ, ಕಡೂರು ಕಡೆಯ ಪ್ರಾದೇಶಿಕ ಕನ್ನಡ ಬಳಸಿದ್ದೇವೆ. ಇವೆಲ್ಲವೂ ಜನರಿಗೆ ತುಂಬಾ ಇಷ್ಟವಾಗುವುದರಲ್ಲಿ ಸಂದೇಹವೇ ಇಲ್ಲ’ ಎಂದು ನಗುತ್ತಾರೆ.

ಸದ್ಯ ಧರ್ಮಣ್ಣ ಅಭಿನಯದ ‘ರಾಜಯೋಗ’, ‘ರಾನಿ’, ‘ಅನ್‌ಲಾಕ್ ರಾಘವ’, ‘ದಿಲ್‌ಖುಷ್’, ‘ಸೂಪರ್‌ಸ್ಟಾರ್’ ಸಿನಿಮಾಗಳ ಚಿತ್ರೀಕರಣ ನಡೆಯುತ್ತಿದ್ದು, ‘ಉಪಾಧ್ಯಕ್ಷ’, ‘ಗರಡಿ’, ‘ಅಮರಪ್ರೇಮಿ ಅರುಣ್’ ಬಿಡುಗಡೆಗೆ ಸಿದ್ಧವಾಗಿದೆ.

‘ನಾವು ನಿಸ್ವಾರ್ಥವಾಗಿ ಜನರನ್ನು ನಗಿಸುತ್ತೇವಲ್ಲ, ಆ ನಗುವಿನಲ್ಲಿ ದೇವರು ಕಾಣುತ್ತಾನೆ ಎಂದು ನನ್ನ ಗುರುಗಳು ಹೇಳುತ್ತಲೇ ಇದ್ದರು. ಹೀಗಾಗಿ ಎಷ್ಟು ಸಾಧ್ಯವೋ ಅಷ್ಟು ಜನರನ್ನು ನಗಿಸಿ ಆ ನಗುವಿನಲ್ಲಿ ಪದೇ ಪದೇ ದೇವರನ್ನು ನೋಡುತ್ತಲೇ ಇರುವುದು ನನ್ನ ಆಸೆ’ ಎಂದು ಭಾವುಕರಾಗುತ್ತಾರೆ ಅವರು. ■

# ಜನರ ಬಳಿಗೆ ಅಮೃತಮತಿ

ವಾಣಿಜ್ಯಿಕ ಸಿನಿಮಾಗಳ ಭರಾಟೆಯಲ್ಲಿ ಕಳೆದುಹೋಗುತ್ತಿರುವ ಕನ್ನಡದ ಕಲಾತ್ಮಕ ಅಥವಾ ಪ್ರಯೋಗಾತ್ಮಕ ಮಾದರಿಯ ಸಿನಿಮಾಗಳನ್ನು ಜನರ ಹತ್ತಿರಕ್ಕೆ ಕೊಂಡೊಯ್ಯುವ ಪ್ರಯತ್ನವಾಗಿ, ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ‘ಚಿತ್ರಯಾತ್ರೆ’ ಎಂಬ ನೂತನ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದಾರೆ.

ಕಮರ್ಷಿಯಲ್ ಸಿನಿಮಾಗಳ ನಡುವೆ ಕಲಾತ್ಮಕ ಸಿನಿಮಾಗಳು ಬಿಡುಗಡೆಯಾದರೂ, ಚಿತ್ರಮಂದಿರಗಳಲ್ಲಿ ಹೆಚ್ಚು ದಿನಗಳು ಉಳಿಯುವುದೇ ಕಷ್ಟ. ಆದರೆ ಇಂಥ ಸಿನಿಮಾಗಳನ್ನು ಜನರಿಗೆ ತಲುಪಿಸುವ ಪ್ರಮುಖ ಉದ್ದೇಶದೊಂದಿಗೆ, ‘ಸಮುದಾಯದತ್ತ ಸಿನಿಮಾ’ ಎಂಬ ನೂತನ ಪರಿಕಲ್ಪನೆಯಲ್ಲಿ ಚಿತ್ರಯಾತ್ರೆ ನಡೆಸಲಾಗುತ್ತಿದೆ.

ಈ ಸಿನಿಮಾಗಳನ್ನು ಜನರಿಗೆ ತಲುಪಿಸಲು ಸೂಕ್ತ ಮಾದರಿಯ ಹುಡುಕಾಟದಲ್ಲಿ ಈ ಪರಿಕಲ್ಪನೆ ಒಡಮೂಡಿದೆ. ಮೊಟ್ಟ ಮೊದಲು, ಅಂತರರಾಷ್ಟ್ರೀಯ ಪ್ರಶಸ್ತಿಗಳಿಗೆ ಪಾತ್ರವಾದ, ಬರಗೂರು ರಾಮಚಂದ್ರಪ್ಪ ಅವರ ನಿರ್ದೇಶನದ ‘ಅಮೃತಮತಿ’ ಸಿನಿಮಾವನ್ನು ಸಮುದಾಯದತ್ತ ಕೊಂಡೊಯ್ಯುವ ಯೋಜನೆ ರೂಪಿಸಲಾಗಿದೆ.

13ನೇ ಶತಮಾನದಲ್ಲಿ, ಜನ್ನ ಕವಿಯಿಂದ ರಚಿತವಾದ ‘ಯಶೋಧರ ಚರಿತೆ’ಯಲ್ಲಿನ ಅಮೃತಮತಿ ಪ್ರಸಂಗವನ್ನು ಪ್ರಮುಖವಾಗಿ ಆಧರಿಸಿ ಕೆಲವು ಬದಲಾವಣೆಗಳೊಂದಿಗೆ ಸಿನಿಮಾ ರೂಪಕ್ಕೆ ಅಳವಡಿಸಲಾಗಿದೆ.

ಈಗಾಗಲೇ ಬೆಂಗಳೂರು, ತುಮಕೂರು, ಮೈಸೂರು, ಮಂಡ್ಯ, ಮಳವಳ್ಳಿ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಬೆಳಗಾವಿ, ಬಳ್ಳಾರಿ, ಹೊಸಪೇಟೆ, ಕಲಬುರಗಿ, ಸಿರಾ, ಶಿವಮೊಗ್ಗ, ಚಾಮರಾಜನಗರ ಮುಂತಾದ ಊರುಗಳಲ್ಲಿ ಸಿದ್ಧತೆಗಳು ನಡೆಯುತ್ತಿದ್ದು, ಇನ್ನೂ ಕೆಲವು ಊರುಗಳು ಚಿತ್ರಯಾತ್ರೆಗೆ ಸೇರ್ಪಡೆಯಾಗಲಿವೆ. ಒಂದೊಂದು ಊರಿನಲ್ಲಿ ಎರಡರಿಂದ ಐದಾರು ಪ್ರದರ್ಶನಗಳು ನಡೆಯಲಿದ್ದು, ರಾಜ್ಯಾದ್ಯಂತ ಹತ್ತು ದಿನಗಳಲ್ಲಿ ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡುವ ಗುರಿ ಹೊಂದಲಾಗಿದೆ.

‘ಅಮೃತಮತಿ’ಯ ‘ಸಮುದಾಯದತ್ತ ಸಿನಿಮಾ’ ಚಿತ್ರಯಾತ್ರೆಗೆ ಅಧಿಕೃತವಾಗಿ ಇದೇ ಮಾರ್ಚ್ 24ರಂದು ಬೆಂಗಳೂರಿನಲ್ಲಿ ಚಾಲನೆ ಸಿಗಲಿದೆ. ■

